**ಪಿಡಬ್ಲೂಃ 1** **ಸಿ.ಸಿ ನಂ.1426/2019**

ದಿನಾಂಕ **30-11-2022** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀ.ಎನ್.ಕೆ.ಡಿ. ಆರೋಪಿ ಪರ ವಕೀಲರಿಂದಃ-**

ನನ್ನ ವಿದ್ಯಾಭ್ಯಾಸ 9 ನೇ ತರಗತಿ. ನಾನು ವ್ಯವಸಾಯ ಮಾಡುತ್ತೇನೆ. ಆರೋಪಿ ನನ್ನ ಸಂಬಂಧಿಕರಲ್ಲ, ಆದರೆ ಪರಿಚಯ ಇದ್ದಾರೆ. ಆರೋಪಿ ನನ್ನ ಸಹಪಾಠಿಯಲ್ಲ. ಆರೋಪಿಯ ಊರು ಮಡಬಹಳ್ಳಿ ಗ್ರಾಮ. ನನ್ನ ಊರು ದೊಡ್ಡಕೊಂಡ್ರಹಳ್ಳಿ ಗ್ರಾಮ ಎಂದರೆ ಸರಿ.

ನಮ್ಮ ಮನೆಯಲ್ಲಿ 4 ಜನ ಇದ್ದೇವೆ. ಅವರೆಂದರೆ ನಾನು, ನನ್ನ ಹೆಂಡತಿ ಮತ್ತು ನನ್ನ ಇಬ್ಬರು ಮಕ್ಕಳು. ನನ್ನ ತಂದೆ ಮರಣ ಹೊಂದಿರುತ್ತಾರೆ. ನನ್ನ ತಾಯಿ ನನ್ನ ಅಣ್ಣನ ಹತ್ತಿರ ಇದ್ದಾರೆ. ಮನೆಯ ಯಜಮಾನಿಕೆಯನ್ನು ನಾನೇ ಮಾಡುತ್ತೇನೆ. ನನ್ನ ಹೆಂಡತಿ ಮಕ್ಕಳು ನನ್ನ ಆದಾಯ ಮೇಲೆ ಅವಲಂಬಿತರಾಗಿದ್ದಾರೆ ಎಂದರೆ ಸರಿ.

ಆರೋಪಿ ಸುಮಾರು 10 ವರ್ಷಗಳಿಂದ ಪರಿಚಯ ಇದ್ದಾನೆ. ಆರೋಪಿ ವ್ಯವಸಾಯ ಮಾಡುತ್ತಾರೆ. ಆರೋಪಿಯ ಕುಟುಂಬಸ್ಥರ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ಆರೋಪಿಯ ಕುಟುಂಬಸ್ಥರ ಆರ್ಥಿಕ ಪರಿಸ್ಥಿತಿಯ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ಆರೋಪಿಯ ಮನೆಯಲ್ಲಿ ಅವರ ತಂದೆ ಯಜಮಾನಿಕೆಯನ್ನು ಮಾಡುತ್ತಾರೆ ಎಂದರೆ ಸರಿ. ನನಗೆ ಒಂದು ಹೆಣ್ಣು ಮತ್ತು ಒಂದು ಗಂಡು ಮಕ್ಕಳು ಇದ್ದಾರೆ. ನನ್ನ ಮಗಳು ಸಿ.ಎ. ಮಾಡುತ್ತಿದ್ದಾಳೆ. ನನ್ನ ಮಗ ದ್ವಿತೀಯ ವರ್ಷದ ಪದವಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನ್ನ ಮಕ್ಕಳ ಜಾತಿ ಆದಾಯ ಪ್ರಮಾಣ ಪತ್ರವನ್ನು ಮಾಡಿಸಿದ್ದೇವೆ ಅದರಲ್ಲಿ ಎಷ್ಟು ಆದಾಯ ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾತಿ ಆದಾಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಕೊಡುತ್ತೀರಾ ಎಂದರೆ ಅದು ನನ್ನ ಮಕ್ಕಳ ಹತ್ತಿರ ಇದೆ ಎನ್ನುತ್ತಾರೆ.

ನನ್ನ ಜಮೀನು 2 ಎಕರೆ 08 ಗುಂಟೆ ಇದೆ. ಆ ಜಮೀನಿನಲ್ಲಿ ನಾನು ರೇಷ್ಮೆ ಬೆಳೆ ಇಟ್ಟಿರುತ್ತೇನೆ.

ನನ್ನದು ಬಿ.ಪಿ.ಎಲ್. ಕಾರ್ಡ್ ಇದೆ.

ನನ್ನ ಮಕ್ಕಳು ಖಾಸಗಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನನ್ನ ಮನೆಯ ತಿಂಗಳ ಖರ್ಚು 10,000/- ರೂಪಾಯಿ. ನನ್ನ ಮಗನ ವರ್ಷದ ವಿದ್ಯಾಭ್ಯಾಸ ಖರ್ಚು 20,000/- ರೂ. ನನ್ನ ಮಗಳ ವಿದ್ಯಾಭ್ಯಾಸ ಖರ್ಚು ತಿಂಗಳಿಗೆ 5,000/- ರೂಪಾಯಿ. ನನ್ನ ವಾರ್ಷಿಕ ವರಮಾನ ಎಷ್ಟಿದೆ ಎಂದರೆ ತಿಂಗಳಿಗೆ 70-80 ಸಾವಿರ ರೂ. ಆದಾಯ ಇದೆ. ರೇಷ್ಮೆ ಹುಳು ಮೇಯಿಸುವುದರಿಂದ ನನಗೆ ಅಷ್ಟು ಆದಾಯ ಬರುತ್ತದೆ. ಒಂದು ಸಲ ರೇಷ್ಮೆ ಬೆಳೆಯನ್ನು ಕಟಾವು ಮಾಡಿದರೆ ಇನ್ನೊಂದು ಸಲ ಕಟಾವು ಮಾಡಲು ಒಂದರಿಂದ ಒಂದೂವರೆ ತಿಂಗಳು ಬೇಕು ಎಂದರೆ ಸಾಕ್ಷಿಯು ಎರಡು ತಿಂಗಳು ಬೇಕು ಎನ್ನುತ್ತಾರೆ.

ನನ್ನದು ಕೈವಾರದ ಕೆನರಾ ಬ್ಯಾಂಕಿನಲ್ಲಿ ಖಾತೆ ಇದೆ. ಮೊದಲು ನಾನು 50 ಸಾವಿರ ರೂ. ಹಣವನ್ನು ಬ್ಯಾಂಕಿನಲ್ಲಿ ಇಟ್ಟಿದ್ದೆ, 10 ಲಕ್ಷ ರೂ. ಹಣವನ್ನು ಮನೆ ಕಟ್ಟಬೇಕು ಎಂದು ಮನೆಯಲ್ಲಿ ಇಟ್ಟಿದ್ದೆ. ಸಾಕ್ಷಿಯು ಮುಂದುವರೆದು ಇತ್ತೀಚೆಗೆ ನಾನು ಸಾಲ ಮಾಡಿ ಮನೆಯನ್ನು ಕಟ್ಟಿರುತ್ತೇನೆ. ನಾನು ಮನೆಯನ್ನು ಕಟ್ಟಿದ್ದು 2020 ರಲ್ಲಿ. ಸಾಕ್ಷಿಯು ಮುಂದುವರೆದು ಸಂಸಾರದ ಮನೆ ಬೇರೆ ಕಟ್ಟಿರುತ್ತೇನೆ ಮತ್ತು ಹುಳು ಮೇಯಿಸುವ ಮನೆ ಬೇರೆ ಕಟ್ಟಿರುತ್ತೇನೆ. ಹುಳು ಮನೆಯನ್ನು ನಾನು 2011 ರಲ್ಲಿ 7,50,000/- ರೂ. ಖರ್ಚು ಮಾಡಿ ಕಟ್ಟಿರುತ್ತೇನೆ. 2020 ರಲ್ಲಿ 35 ಲಕ್ಷ ರೂ. ಖರ್ಚು ಮಾಡಿ ಸಂಸಾರದ ಮನೆ ಕಟ್ಟಿರುತ್ತೇನೆ.

ನವೆಂಬರ್ 1, 2019 ರಲ್ಲಿ ಸದರಿ ಮನೆಯನ್ನು ಕಟ್ಟಲು ಪ್ರಾರಂಭಿಸಿದ್ದೆ. ಮನೆ ಕಟ್ಟಲು 18-20 ಲಕ್ಷ ರೂ. ಕೈ ಸಾಲವನ್ನು ಸಂಬಂಧಿಕರ ಹತ್ತಿರ ಮತ್ತು ನೆಂಟರಿಷ್ಟರ ಹತ್ತಿರ ಮಾಡಿದ್ದೆ. ಬ್ಯಾಂಕಿನಲ್ಲಿ ಆಭರಣ ಇಟ್ಟು 8 ಲಕ್ಷ ರೂ. ಸಾಲ ಪಡೆದಿದ್ದೆ. 1,50,000/- ರೂ. ಬ್ಯಾಂಕಿನಲ್ಲಿ ಬೆಳೆ ಸಾಲ ಪಡೆದಿದ್ದೆ. 2021 ರಲ್ಲಿ ಬೆಳೆ ಸಾಲ ಪಡೆದಿರುತ್ತೇನೆ. ಆಭರಣ ಇಟ್ಟು ಸಾಲವನ್ನು 2019-20 ರಲ್ಲಿ ಪಡೆದಿರುತ್ತೇನೆ.

ಬ್ಯಾಂಕಿನಲ್ಲಿ ಬಡ್ಡಿಗಾಗಿ ಸಾಲ ಪಡೆದಿದ್ದೆ, ಕೈಸಾಲವನ್ನು ಬಡ್ಡಿಗಾಗಿ ಪಡೆದಿಲ್ಲ. ಎಷ್ಟು ಬಡ್ಡಿ ಎಂದು ಹೇಳಲು ಆಗುವುದಿಲ್ಲ.

2018-2020 ರಲ್ಲಿ ಎಷ್ಟು ಹಣವನ್ನು ಬ್ಯಾಂಕಿನಲ್ಲಿ ಇಟ್ಟಿದ್ದೆ ಎಂದರೆ ಸಾಕ್ಷಿಯು ರೇಷ್ಮೆಯಿಂದ ನಮಗೆ ನಗದು ರೂಪದಲ್ಲಿ ಹಣವನ್ನು ಕೊಡುತ್ತಿದ್ದರು, ಆದ್ದರಿಂದ ಬ್ಯಾಂಕಿನಲ್ಲಿ ಇಟ್ಟಿಲ್ಲ ಎನ್ನುತ್ತಾರೆ. ರೇಷ್ಮೆ ಗೂಡನ್ನು ಮಾರಾಟ ಮಾಡಿದರೆ ಖಾತೆಗೆ ಹಣವನ್ನು ಜಮಾ ಮಾಡುತ್ತಾರೆ ಎಂದರೆ ಸಾಕ್ಷಿಯು 2020 ರ ನಂತರ ಹಣವನ್ನು ಖಾತೆಗೆ ಜಮಾ ಮಾಡುತ್ತಿದ್ದಾರೆ, ಮೊದಲು ಹಾಕುತ್ತಿರಲಿಲ್ಲ ಎನ್ನುತ್ತಾರೆ.

ನಾನು ಹಣದ ವ್ಯವಹಾರ ಮಾಡುವುದಿಲ್ಲ. ಯಾರಿಗಾದರೂ ನಾನು ಕೈಸಾಲ ಕೊಟ್ಟಿದ್ದರೆ, ಅವರು ನನಗೆ ಕೈಸಾಲ ಕೊಡುತ್ತಾರೆ ಎಂದರೆ ಸಾಕ್ಷಿಯು ನಾವು ಸರಿಯಿದ್ದರೆ ಎಲ್ಲರೂ ಕೊಡುತ್ತಾರೆ ಎನ್ನುತ್ತಾರೆ. ನಾನು ವಿಶ್ವಾಸ ಇರುವವರಿಗೆ ಮಾತ್ರ ಕೈಸಾಲ ಕೊಟ್ಟಿದ್ದೆ ಯಾರು ಯಾರಿಗೆ ಕೈಸಾಲ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಅವೆಲ್ಲಾ Personal ಇರುತ್ತೆ, ನಿಮ್ಮ ಮುಂದೆ ಹೇಳಲು ಆಗುತ್ತಾ ಎನ್ನುತ್ತಾರೆ. ಯಾವ ವರ್ಷದಲ್ಲಿ ಕೈ ಸಾಲ ಕೊಟ್ಟಿದ್ದೀರಿ ಎಂದರೆ ಅದನ್ನು ಹೇಳಲು ಆಗುವುದಿಲ್ಲ

ಎನ್ನುತ್ತಾರೆ. ಎಷ್ಟು ಜನರಿಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಅವೆಲ್ಲಾ ಹೇಳಲು ಆಗುವುದಿಲ್ಲ ಎನ್ನುತ್ತಾರೆ.

ಆರೋಪಿಗೆ 2019 ರ ಕಾಲಕ್ಕೆ 40 ವರ್ಷ ವಯಸ್ಸು ಎಂದರೆ ಸರಿ. ಆರೋಪಿ ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ಆರೋಪಿಯ ಹೆಸರು ಮಂಜಣ್ಣ.ಎಂ. ಬಿನ್ ಮುನಿವೆಂಕಟಪ್ಪ ಎಂದರೆ ಸರಿ. ಅದೇ ಊರಿನಲ್ಲಿ ಎಂ.ಮಂಜಣ್ಣ ಬಿನ್ ಮುನಿವೆಂಕಟಪ್ಪರವರು ಇದ್ದಾರೆ ಎಂದರೆ ಸಾಕ್ಷಿಯು ಅವರಿಗೆ ನನ್ನ ನಾದಿನಿಯನ್ನು ಮದುವೆಮಾಡಿಕೊಟ್ಟಿರುತ್ತೇವೆ ಎನ್ನುತ್ತಾರೆ.

ಈ ಪ್ರಕರಣವನ್ನು ಹೂಡುವುದಕ್ಕಿಂತ ಮುಂಚೆ ದಿನಾಂಕಃ02.05.2019 ರಂದು ನೋಟಿಸ್ ನ್ನು ಕೊಟ್ಟಿದ್ದೆ. ಸದರಿ ನೋಟಿಸ್ ನ್ನು ಕೊಡಲು ಯಾರು ಮಾಹಿತಿಯನ್ನು ಕೊಟ್ಟರು ಎಂದರೆ ವಕೀಲರನ್ನು ಕೇಳಿ ಮಾಡಿರುತ್ತೇನೆ. ಸದರಿ ನೋಟಿಸು ಆರೋಪಿಗೆ ಜಾರಿಯಾಗಿದೆಯಾ ಅಥವಾ ಇಲ್ಲವಾ ಎಂಬುದರ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ತಿಳಿದುಕೊಂಡಿರುತ್ತೇನೆ, ಆದರೆ ವಿಳಾಸ ಸರಿಯಿಲ್ಲ ಎಂದು ಬಂದಿರುತ್ತದೆ ಎನ್ನುತ್ತಾರೆ. ನಾನು ಆರೋಪಿಯ ಹೆಸರು, ವಿಳಾಸವನ್ನು ಸರಿಯಾಗಿ ಕೊಟ್ಟಿಲ್ಲ, ಆದ್ದರಿಂದ ನೋಟಿಸು ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ.

2019 ಜನವರಿ ಮೊದಲನೇ ವಾರದಂದು ಆರೋಪಿ ನನ್ನ ಹತ್ತಿರ ಹಣ ಕೇಳಲು ಬಂದಿದ್ದರು. ಮೊದಲನೇ ವಾರ ಎಂದರೆ ಜನವರಿ 1 ನೇ ತಾರೀಖು ಎನ್ನುತ್ತಾರೆ. ಸದರಿ ವಿಷಯವನ್ನು ನನ್ನ ದೂರಿನಲ್ಲಿ, ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ

4-5 ವರ್ಷಗಳಿಂದ ಮನೆ ಕಟ್ಟಲು ಹಣವನ್ನು ಹೊಂದಿಸಿ ಒಟ್ಟಾರೆಯಾಗಿ 10 ಲಕ್ಷ ರೂ. ಹಣವನ್ನು ಮನೆಯಲ್ಲಿ ಇಟ್ಟುಕೊಂಡಿದ್ದೆ. ಹಣ ಕೇಳಲು ಆರೋಪಿ ಒಬ್ಬನೇ ನಮ್ಮ ಊರಿಗೆ

ಬಂದಿದ್ದರು. ಆರೋಪಿ ಹಣ ಕೇಳಿದ ದಿನ ನಾನು ನನ್ನ ಹತ್ತಿರ ಹಣ ಇಲ್ಲ ಎಂದು ಹೇಳಿದೆ, ಆಗ ಆರೋಪಿ ನನಗೆ ಸಮಸ್ಯೆ ಇದೆ ಹಣ ಕೊಡು ಎಂದು ಕೇಳಿದ್ದರು. ನಂತರ ಆರೋಪಿಗೆ 4-5 ದಿನ ಬಿಟ್ಟು ಬಾ ಎಂದು ಹೇಳಿ ಕಳುಹಿಸಿದ್ದೆ. ನಂತರ ಹಣ ಹೇಗೆ ಸರಿಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಹಣ ಮನೆಯಲ್ಲಿ ಇತ್ತು ಎನ್ನುತ್ತಾರೆ.

ಆರೋಪಿಗೆ ಹಣ ಕೊಟ್ಟ ವಿಷಯ ನನಗೂ ಮತ್ತು ನನ್ನ ಹೆಂಡತಿಗೂ ಮಾತ್ರ ಗೊತ್ತು ಆರೋಪಿಗೆ ಹಣ ಕೊಡುವ ಕಾಲಕ್ಕೆ ಭದ್ರತೆಗಾಗಿ ಏನನ್ನಾದರೂ ಬರೆದುಕೊಡು ಎಂದು ನಾನು ಕೇಳಲಿಲ್ಲ. ಸಾಕ್ಷಿಯು ಮುಂದುವರೆದು ನಾನು ನಿನಗೆ 3 ತಿಂಗಳೊಳಗಡೆ ಕೊಡುತ್ತೇನೆಂದು ಹೇಳಿದ್ದರು. 3 ತಿಂಗಳ ಅವಧಿಯಲ್ಲಿ ನಾನು 2 ಬಾರಿ ಹೋಗಿ ಹಣ ಕೇಳಿದ್ದೆ, 3 ತಿಂಗಳ ನಂತರವೂ ಸಹ ಹಣ ಕೇಳಿದ್ದೆ, ನಂತರ ಆರೋಪಿ ನನ್ನ ಖಾತೆಯಲ್ಲಿ ಹಣ ಇದೆ ಬಾ ನಮ್ಮ ಊರಿಗೆ ಎಂದು ಕರೆದ, ನಾನು ಅವರ ಊರಿಗೆ ಹೋದೆ, ನಂತರ ಚೆಕ್ ನ್ನು ಕೊಟ್ಟಿದ್ದರು. ಚೆಕ್ ನ್ನು ದಿನಾಂಕಃ08.04.2019 ರಂದು ಕೊಟ್ಟಿದ್ದರು.

ಚೆಕ್ ಎಸ್.ಬಿ.ಐ. ಚಿಂತಾಮಣಿಗೆ ಸೇರಿದ್ದು, ಸದರಿ ಚೆಕ್ ನ್ನು ಕೈವಾರದಲ್ಲಿ ನಗದೀಕರಣಕ್ಕೆ ಹಾಕಿದ್ದೆ. ನಿ.ಪಿ.1 ನಾನ್ ಸಿ.ಟಿ.ಎಸ್. ಚೆಕ್, ಅದನ್ನು 2010 ಕ್ಕಿಂತ ಮೊದಲು ಬ್ಯಾಂಕ್ ನವರು ನೀಡುತ್ತಿದ್ದರು ಎಂದರೆ ಸಾಕ್ಷಿಯು ಆ ಚೆಕ್ ಎಷ್ಟನೇ ವರ್ಷದ್ದು ಎಂಬುದು ನನಗೆ ಗೊತ್ತಿಲ್ಲ, ಆದರೆ ನನಗೆ ಚೆಕ್ ಕೊಟ್ಟಿದ್ದರು, ನಾನು ಅದನ್ನು ತೆಗೆದುಕೊಂಡು ಬ್ಯಾಂಕಿಗೆ ಹಾಕಿದ್ದೆ.

ನನ್ನದು ಜಮೀನು ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ. ನನ್ನ ಆದಾಯವನ್ನು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ.

ನನಗೆ ಜಮೀನು ಇಲ್ಲ, ಆದಾಯ ಇಲ್ಲ, ಆದ್ದರಿಂದ ನಾನು ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಇದೆ, ಕೊಡುತ್ತೇನೆ ಎನ್ನುತ್ತಾರೆ.

ಆರೋಪಿಗೆ ಈ ಹಣದ ವ್ಯವಹಾರಕ್ಕಿಂತ ಮೊದಲು ಯಾವುದೇ ಹಣ ಕೊಟ್ಟಿರಲಿಲ್ಲ. ಆರೋಪಿಗೆ ಏನು ಸಮಸ್ಯೆ ಇದೆ ಎಂಬುದನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಜಮೀನಿನಲ್ಲಿ ಬೋರ್ ವೆಲ್ ಹಾಕಿಸಬೇಕು ಎಂದು ಹೇಳುತ್ತಿದ್ದರು. ನಾನು ಪರಿಶೀಲನೆ ಮಾಡಿ ಹಣ ಕೊಟ್ಟಿಲ್ಲ, ಆದರೆ ಹೋಗುವುದು ಬರುವುದು ಮಾಡುತ್ತಿದ್ದೆ. ಆ ಸಮಯದಲ್ಲಿ ನನ್ನ ನಾದಿನಿ ಇದ್ದಳು, ಅವಳು ನೋಡಿರುತ್ತಾಳೆ.

ನಾನು ನಿನಗೆ ಕೊಟ್ಟಿರುವ ಹಣವನ್ನು ನೀನು ಹೇಗೆ ಹಣ ಮರುಪಾವತಿ ಮಾಡುತ್ತೀಯಾ ಎಂದು ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಾನು ನಿನಗೆ ಹಣ ಹೊಂದಿಸಿ ಕೊಡುತ್ತೇನೆ, ಟಮೋಟೋ ಬೆಳೆ ಹಾಕುತ್ತಿದ್ದೇನೆ ಕೊಡುತ್ತೇನೆ ಎಂದು ಹೇಳುತ್ತಿದ್ದರು ಎನ್ನುತ್ತಾರೆ. ಆರೋಪಿ ಟಮೋಟೋ ಸಸಿಗಳನ್ನು ನಾಟಿ ಮಾಡುತ್ತಿದ್ದರು, ನಾನು ಹೋಗಿ ನೋಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.